ಸರ್ಕಾರಿ ಪ್ರೌಢಶಾಲೆ , ಗೊರಗುಂಟೆಪಾಳ್ಯ, ಬೆಂಗಳೂರು–22.

ತರಗತಿ : 10 | ಪೂರ್ವಸಿದ್ಧತಾ ಪರೀಕ್ಷೆ | ಅಂಕಗಳು : 80

ವಿಷಯ : ವಿಜ್ಞಾನ | ಅವಧಿ : 3 ಗಂಟೆ

**I.** ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಆಯ್ಕೆಯಗಳನ್ನು ನೀಡಲಾಗಿದೆ. ಸರಿಯಾದ ಆಯ್ಕೆಯನ್ನು ಆರಿಸಿ ಕೊಟ್ಟಿರುವ ಸ್ಥಳದಲ್ಲಿಯೇ ಬರೆಯಿರಿ. **10x1=10**

1. ಈ ಕೆಳಗಿನ ಯಾವುದು ಜೈವಿಕ ಶಕ್ತಿಯ ಲಕ್ಷಣವಲ್ಲ ?

A) ಮಣ್ಣಿನ ಗುಣವನ್ನು ಹೆಚ್ಚಿಸುವುದು. B) ನೀರು ಉಳಿಸಿಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವುದು.

C) ವಾತಾವರಣದಲ್ಲಿ ಕಾರ್ಬನ್ ಡೈ ಆಕ್ಸೈಡ್ ಪ್ರಮಾಣವನ್ನು ಕಡಿಮೆ ಮಾಡುವುದು. D) ಪರಿಸರ ಮಾಲಿನ್ಯವನ್ನು ಹೆಚ್ಚಿಸುವುದು.

2. ಬೆಂಜೀನನ್ನು ಸೈಕ್ಲೋಹೆಕ್ಸೇನ್ ಆಗಿಸಲು ಸೇರಿಸಬೇಕಾದ ಹೈಡ್ರೋಜನ್ ಪರಮಾಣುಗಳ ಸಂಖ್ಯೆ

A) 2 B) 3 C) 4 D) 6

3. ವಾತಾವರಣದಲ್ಲಿರುವ ಓಝೋನ್‌ನ ನಾಶಕ್ಕೆ ಕಾರಣವಾಗುವ ವಸ್ತು

A) ಮರ್ಕ್ಯುರಿ B) ಕಾರ್ಬನ್ C) ಕ್ಲೋರಿನ್ D) ಸೀಸ

4. ಕೆಳಗಿನವುಗಳಲ್ಲಿ ಯಾವುದು ಬೈಜಿಕ ವಿದಳನ ಕ್ರಿಯೆಯಾಗಿದೆ?

A) ಹೈಡ್ರೋಜನ್ ಪರಮಾಣು + ಹೈಡ್ರೋಜನ್ ಪರಮಾಣು → ಹೈಡ್ರೋಜನ್ ಅಣು + ಶಕ್ತಿ

B) ಯುರೇನಿಯಂ + ನ್ಯೂಟ್ರಾನ್ → ಬೇರಿಯಂ + ಕ್ರಿಪ್ಟಾನ್ + ನ್ಯೂಟ್ರಾನ್ + ಶಕ್ತಿ

C) ಹೈಡ್ರೋಜನ್ ನ್ಯೂಕ್ಲಿಯಸ್ + ಹೈಡ್ರೋಜನ್ ನ್ಯೂಕ್ಲಿಯಸ್ → ಹೀಲಿಯಂ ನ್ಯೂಕ್ಲಿಯಸ್ + ಶಕ್ತಿ

D) ಕಾರ್ಬನ್ + ಆಕ್ಸಿಜನ್ → ಕಾರ್ಬನ್ ಡೈ ಆಕ್ಸೈಡ್ + ಶಕ್ತಿ

5. ಜಲಸಸ್ಯಗಳಲ್ಲಿ ಎಲೆಗಳು ತೇಲಾಡಲು ಕಾರಣವಾದ ಅಂಗಾಂಶ

A) ಏರಂಕೈಮ B) ಪೇರಂಕೈಮ C) ಕೋಲಂಕೈಮ D) ಸ್ಕ್ಲೀರಂಕೈಮ

6. ಒಂದು ಆಲ್ಕೇನ್‌ನಲ್ಲಿ ಹೈಡ್ರೋಜನ್ ಪರಮಾಣುಗಳ ಸಂಖ್ಯೆ 10 ಆದರೆ, ಅದರಲ್ಲಿರುವ ಕಾರ್ಬನ್ ಪರಮಾಣುಗಳ ಸಂಖ್ಯೆ

A) 6 B) 4 C) 3 D) 5

7. ಒಂದು ಹಡಗು ಶ್ರವಣಾತೀತ ಧ್ವನಿಯನ್ನು ಪ್ರೇಷಿಸುತ್ತದೆ. ಈ ಧ್ವನಿಯು ಸಮುದ್ರತಳದಿಂದ ಪ್ರತಿಫಲಿಸಿ 4s ನಂತರ ಹಿಂತಿರುಗುತ್ತದೆ. ನೀರಿನಲ್ಲಿ ಶ್ರವಣಾತೀತ ಧ್ವನಿಯ ಜವ 1.5 ಕಿ.ಮೀ. ಆಗಿದ್ದಲ್ಲಿ , ಸಮುದ್ರದ ಆಳ

A) 5 m B) 4 m C) 2 m D) 3 m

8. ಪ್ರಾಣಿಗಳಲ್ಲಿ ಕಂಡುಬರುವ ನಾಲ್ಕು ಬಗೆಯ ಮೂಲ ಅಂಗಾಂಶಗಳು

A) ಹೊರದರ್ಮ , ಅನುಲೇಪಕ , ಸ್ನಾಯು , ಸಂಯೋಜಕ

B) ಅನುಲೇಪಕ , ಸ್ನಾಯು , ಸಂಯೋಜಕ , ಘನಾಕೃತಿ

C) ಚಪ್ಪಟೆ ಅನುಲೇಪಕ, ಸ್ತಂಭಾಕೃತಿ , ಘನಾಕೃತಿ , ಸಂಯೋಜಕ

D) ಅನುಲೇಪಕ , ಸ್ನಾಯು , ಸಂಯೋಜಕ , ನರ ಅಂಗಾಂಶ

9. ಸ್ಟೈನ್‌ಲೆಸ್‌ಉಕ್ಕನ್ನು ಶಸ್ತ್ರಚಿಕಿತ್ಸೆ ಉಪಕರಣಗಳನ್ನು ಮಾಡಲು ಉಪಯೋಗಿಸುತ್ತಾರೆ. ಏಕೆಂದರೆ,

A) ಇದು ಹೆಚ್ಚು ವ್ಯಾಕೋಚನ ಗುಣವನ್ನು ಹೊಂದಿದೆ.

B) ಶಾಖದ ಏರಿಳಿತಗಳಿಂದ ಇದರ ಉದ್ದದಲ್ಲಿ ಗಣನೀಯ ಬದಲಾವಣೆಯಾಗುವುದಿಲ್ಲ.

C) ಇವು ಸೌಮ್ಯ ರಾಸಾಯನಿಕಗಳಿಂದ ಪ್ರಭಾವಿತವಾಗುವುದಿಲ್ಲ

D) ಇದು ಅತಿ ಹೆಚ್ಚು ತನ್ಯ ಗುಣವನ್ನು ಹೊಂದಿದೆ.

10. ಕೆಂಪು ಹೂಗಳನ್ನು ಬಿಡುವ ಗಿಡವನ್ನು, ಬಿಳಿಹೂಗಳನ್ನು ಬಿಡುವ ಗಿಡದೊಂದಿಗೆ ಸಂಕರಣಗೊಳಿಸಲಾಗಿದೆ. ಇವುಗಳಲ್ಲಿ ಒಂದು, ಗುಲಾಬಿ ಹೂಗಳನ್ನು ಹೊಂದಿರುವ ಗಿಡವನ್ನು ಸೂಚಿಸುತ್ತದೆ.

A) RR B) RW c) WW D) rw

**II.** A ಪಟ್ಟಿಯಲ್ಲಿ ನೀಡಲಾಗಿರುವ ಸಸ್ಯಗಳ ಹೆಸರುಗಳನ್ನು B ಪಟ್ಟಿಯಲ್ಲಿರುವ ಅವುಗಳ ರಚನೆ ಮತ್ತು C ಪಟ್ಟಿಯಲ್ಲಿರುವ ಅವುಗಳ ಗುಣಲಕ್ಷಣದೊಂದಿಗೆ ಹೊಂದಿಸಿ ಬರೆಯಿರಿ. **4x1=4**

| | A | | B | | C |
|---|---|---|---|---|---|
| 1 | ಹಿಪ್ಪೋಕ್ಯಾಂಪಸ್ | a) | ರೆಪ್ಟೀಲಿಯಾ | i) | 4 ಕೋಣೆಯ ಹೃದಯ, ಬಿಸಿರಕ್ತ ಪ್ರಾಣಿ, 12 ಜೊತೆ ಮಿದುಳು ನರಗಳು |
| 2 | ಇಕ್ತಿಯೋಫಿಸ್ | b) | ಸ್ತನಿಗಳು | ii) | 4 ಕೋಣೆಯ ಹೃದಯ, ಶೀತರಕ್ತ ಪ್ರಾಣಿ, 12 ಜೊತೆ ಮಿದುಳು ನರಗಳು |
| 3. | ಮೊಸಳೆ | c) | ಪೈಸಿಸ್ | iii) | 3 ಕೋಣೆಯ ಹೃದಯ, ಶೀತರಕ್ತ ಪ್ರಾಣಿ, 10 ಜೊತೆ ಮಿದುಳು ನರಗಳು |
| 4. | ಡಾಲ್ಫಿನ್ | d) | ಹಕ್ಕಿಗಳು | iv) | 2 ಕೋಣೆಯ ಹೃದಯ, ಶೀತರಕ್ತ ಪ್ರಾಣಿ, 10 ಜೊತೆ ಮಿದುಳು ನರಗಳು |
| | | e) | ಆಂಫೀಬಿಯಾ | v) | 3 ಕೋಣೆಯ ಹೃದಯ, ಶೀತರಕ್ತ ಪ್ರಾಣಿ, 12 ಜೊತೆ ಮಿದುಳು ನರಗಳು |
| | | f) | ನಾನ್ ಕಾರ್ಡೇಟಾಗಳು | vi) | 3 ಕೋಣೆಯ ಹೃದಯ, ಬಿಸಿರಕ್ತ ಪ್ರಾಣಿ, 10 ಜೊತೆ ಮಿದುಳು ನರಗಳು |

**III.** ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. **7x1=7**

12. ಕರ್ನಾಟಕ ಸರ್ಕಾರ ರೈತರಿಗೆ ಜಟ್ರೋಪ ಸಸ್ಯ ಬೆಳೆಯಲು ಪ್ರೇರೇಪಿಸುತ್ತಿದೆ. ಏಕೆ?
13. ಮಾಸ್ ಸಸ್ಯಗಳು ಮಣ್ಣಿನ ಸವಕಳಿಯನ್ನು ನಿಯಂತ್ರಿಸಲು, ಮಣ್ಣು ರೂಪುಗೊಳ್ಳಲು ಸಹಾಯಕವಾಗಿವೆ. ಪುಷ್ಟೀಕರಿಸಿ.
14. ಈ ರಾಸಾಯನಿಕ ಕ್ರಿಯೆಯ ಸರಿದೂಗಿಸಿದ ಸಮೀಕರಣವನ್ನು ಬರೆಯಿರಿ.
    ಸುಕ್ರೋಸ್ ನೀರಿನೊಂದಿಗೆ ವರ್ತಿಸಿ ಗ್ಲುಕೋಸ್ ಮತ್ತು ಫ್ರಕ್ಟೋಸ್ ಅನ್ನು ಉಂಟುಮಾಡುತ್ತದೆ.
15. ಬಹುಹಂತ ರಾಕೆಟ್‌ಗಳು ಎಂದರೇನು?
16. ನಕ್ಷತ್ರಗಳ ಬಣ್ಣಗಳಿಗೆ ಕಾರಣವೇನು?
17. ಥೈರಾಕ್ಸಿನ್ ಅನ್ನು ವ್ಯಕ್ತಿತ್ವದ ಹಾರ್ಮೋನು ಎಂದು ಕರೆಯಲು ಕಾರಣವೇನು?
18. ವಿದ್ಯುತ್‌ದ್ವಾರಗಳನ್ನು ಸೋಡಿಯಂ ಕ್ಲೋರೈಡ್ ದ್ರಾವಣದಲ್ಲಿ ಮುಳುಗಿಸಿದಾಗ ದೀಪ ಪ್ರಕಾಶಮಾನವಾಗಿ ಹೊತ್ತಿಕೊಳ್ಳುವುದು. ಏಕೆ?

**IV.** ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿ. **16x2=32**

19. ಏಕಹಂತ ರಾಕೆಟ್‌ನ ಅಂದವಾದ ಚಿತ್ರವನ್ನು ಬರೆದು ಭಾಗಗಳನ್ನು ಗುರುತಿಸಿ.
20. ಅಸ್ಪಟಿಕ ಮತ್ತು ಸ್ಫಟಿಕ ಸಿಲಿಕಾನ್‌ಗಳ ಉದ್ಧರಣವನ್ನು ವಿವರಿಸಿ.
21. ಸಂಚಾರ ನಿಯಂತ್ರಣ ಅಧಿಕಾರಿಗಳು, ವೇಗ ಮಿತಿಯನ್ನು ಮೀರಿ ಚಲಿಸುವ ವಾಹನಗಳನ್ನು ಪತ್ತೆ ಹಚ್ಚಲು ಡಾಪ್ಲರ್ ಪರಿಣಾಮವನ್ನು ಬಳಸುತ್ತಾರೆ ಹೇಗೆ? ವಿವರಿಸಿ.
22. ನಾವು ಇತರ ಪ್ರಾಮುಖಿಗಳ ಜೊತೆಗೆ ಯಾವ ಗುಣಲಕ್ಷಣಗಳನ್ನು ಹಂಚಿಕೊಂಡಿದ್ದೇವೆ?

    ಅಥವಾ

    ಉಭಯವಾಸಿಗಳ ಯಾವುದಾದರು ಎರಡು ಗುಣಲಕ್ಷಣಗಳನ್ನು ಪಟ್ಟಿ ಮಾಡಿ.
23. ಜಲಕೃಷಿ ಮತ್ತು ವಾಯು ಕೃಷಿ ವಿಧಾನಗಳು ವಿಶೇಷವಾಗಿ ಅಂತರಿಕ್ಷ ಸಂಶೋಧನಾ ಕೇಂದ್ರಗಳಲ್ಲಿ ಮಹತ್ವ ಪಡೆದುಕೊಂಡಿವೆ.ವಿವರಿಸಿ.
24. ಸಕ್ಕರೆಯ ಪರ್ಯಾಪ್ತ ದ್ರಾವಣವು ಘನ ಸಕ್ಕರೆಗಿಂತ ಸಿಹಿಯಾಗಿರುತ್ತದೆ.ಇದಕ್ಕೆ ಕಾರಣವೇನು?
25. ಬೈಜಿಕ ಸಮ್ಮಿಳನದ ಮೂಲಕ ವಿದ್ಯುತ್ತನ್ನು ಉತ್ಪಾದಿಸಲು ಆಗುವುದಿಲ್ಲ. ಕಾರಣ ಕೊಡಿ.

    ಅಥವಾ

    ಇತ್ತೀಚೆಗೆ ಜಪಾನ್‌ನಲ್ಲಿ ಬೈಜಿಕಕಾರಿ ಸ್ಫೋಟಗೊಂಡಿದೆ. ಇದರಿಂದ ಉಂಟಾಗುವ ಪರಿಣಾಮವೇನು?
26. ಈ ಕೆಳಗಿನ ದೇಹದ ಭಾಗಗಳ ಚಲನೆಗಳಲ್ಲಿ ಕಂಡುಬರುವ ಸ್ನಾಯು ಅಂಗಾಂಶದ ಬಗೆಗಳನ್ನು ಗುರುತಿಸಿ:
    ಎ) ಅನ್ನನಾಳದಲ್ಲಿ ಕಂಡುಬರುವ ಪರಿಕ್ರಮಣ ಸಂಕೋಚನ ಕ್ರಿಯೆ ಡಿ) ಹೃದಯದ ಬಡಿತ
    ಬಿ) ಕಣ್ಣುಪಾಪೆಯ ಗಾತ್ರವನ್ನು ನಿಯಂತ್ರಿಸುವ ವರ್ಣಪಟಲದ ಚಲನೆ ಇ) ನಡಿಗೆ
    ಸಿ) ರಕ್ತನಾಳಗಳಲ್ಲಿ ಹರಿಯುವ ರಕ್ತದ ಚಲನೆ

ಅಥವಾ

ಅನಿಯಂತ್ರಿತ ಮಧುಮೇಹ ರೋಗಿಗಳಿಗೆ ಕೊಡುವ ಚುಚ್ಚುಮದ್ದು ಯಾವುದು? ಏಕೆ? ವಿವರಿಸಿ.

27. ವಿಮಾನದಲ್ಲಿ ಪ್ರಯಾಣಿಸುವಾಗ ಬಾಯ್ಲ್‌ನ ನಿಯಮವು ಹೇಗೆ ಉಪಯುಕ್ತವಾಗಿದೆ? ವಿವರಿಸಿ.
28. ಆಮ್ಲ ಮಳೆಯನ್ನು ನಿಯಂತ್ರಿಸುವ ಬಗ್ಗೆ ಸಲಹೆಗಳನ್ನು ನೀಡಿ.
29. ಹಬೆ ಇಂಜಿನ್‌ನ ವ್ಯಾಕೋಚಕ ಹೊಡೆತವನ್ನು ತೋರಿಸುವ ಅಂದವಾದ ಚಿತ್ರವನ್ನು ಬರೆದು ಭಾಗಗಳನ್ನು ಗುರುತಿಸಿ.
30. ಯಾಂತ್ರಿಕ ತರಂಗ ಮತ್ತು ವಿದ್ಯುತ್ ಕಾಂತೀಯ ತರಂಗಗಳ ವ್ಯತ್ಯಾಸವನ್ನು ತಿಳಿಸಿ.
31. ಹಬೆ ಇಂಜಿನ್‌ನ ಅನಾನುಕೂಲಗಳನ್ನು ಪಟ್ಟಿ ಮಾಡಿ .
32. ವಿದ್ಯುಲ್ಲೇಪನ ಕ್ರಿಯೆಯಲ್ಲಿ ಬಳಸುವ ವೋಲ್ಟಾಮೀಟರ್‌ನ ಚಿತ್ರವನ್ನು ಬರೆದು ಭಾಗಗಳನ್ನು ಗುರುತಿಸಿ.
33. ಗಾಜನ್ನು ದಿಢೀರನೆ ತಂಪುಗೊಳಿಸಿದರೆ ಏನಾಗುತ್ತದೆ? ವಿವರಿಸಿ.
34. ಕಬ್ಬಿಣದ ಉದ್ಧರಣದಲ್ಲಿಸುಣ್ಣದಕಲ್ಲು ಮತ್ತು ಕೋಕ್‌ಗಳ ಪಾತ್ರವೇನು?

**V.** ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :– **5x3=15**

35. ತಾಮ್ರದ ಉದ್ಧರಣದಲ್ಲಿ ಬಳಸುವ ವಿದ್ಯುದ್ವಿಭಜನೆ ಕೋಶದ ಅಂದವಾದ ಚಿತ್ರವನ್ನು ಬರೆದು ಭಾಗಗಳನ್ನು ಗುರುತಿಸಿ.
36. a) ಟ್ರಾನ್ಸಿಸ್ಟರ್‌ನ ಎರಡು ವಿಧಗಳಿಗಿರುವ ವ್ಯತ್ಯಾಸಗಳನ್ನು ಬರೆಯಿರಿ.

    d) ಟ್ರಾನ್ಸಿಸ್ಟರ್‌ನ ಅನ್ವಯಗಳನ್ನು ತಿಳಿಸಿ.
37. ಹೆಚ್.ಐ.ವಿ.ಯ ರಚನೆಯನ್ನು ತೋರಿಸುವ ಅಂದವಾದ ಚಿತ್ರವನ್ನು ಬರೆದು ಭಾಗಗಳನ್ನು ಗುರುತಿಸಿ.
38. ಆವರ್ತ ಕೋಷ್ಟಕದಲ್ಲಿ ಧಾತುಗಳ ಗುಣಗಳ ಆವರ್ತನೀಯ ಪ್ರವೃತ್ತಿಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿ.

    ಅಥವಾ

    ಕಾರಣ ಕೊಡಿ:–

    i. ಆವರ್ತ ಕೋಷ್ಟಕದಲ್ಲಿ 'f' ಬ್ಲಾಕ್ ಧಾತುಗಳನ್ನು ಪ್ರತ್ಯೇಕವಾಗಿಡಲಾಗಿದೆ.

    ii. ಆವರ್ತದ ಮುಂದೆ ಸಾಗಿದಂತೆ ಪರಮಾಣು ಗಾತ್ರ ಕಡಿಮೆಯಾಗುತ್ತದೆ.

    iii. ಆವರ್ತ ಕೋಷ್ಟಕದ ರಚನೆಯಲ್ಲಿ ಆವರ್ತಕ ನಿಯಮವನ್ನು ಕೆಲವು ಕಡೆ ಪಾಲಿಸಿಲ್ಲ.
39. ಸಸ್ಯ ತಳೀಕರಣಕ್ಕೆ ಜೈವಿಕ ತಂತ್ರಜ್ಞಾನದ ಕೊಡುಗೆಯನ್ನು ತಿಳಿಸಿ.

    ಅಥವಾ

    ಆಹಾರ ಉದ್ಯಮದಲ್ಲಿ ಜೈವಿಕ ತಂತ್ರಜ್ಞಾನದ ಪಾತ್ರವೇನು?

**VI.** ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. **3x4=12**

40. ಮಾನವನ ಕಿವಿಯ ಒಳ ರಚನೆಯನ್ನು ತೋರಿಸುವ ಅಂದವಾದ ಚಿತ್ರ ಬರೆದು ಕೆಳಗಿನ ಭಾಗಗಳನ್ನು ಗುರುತಿಸಿ.

    a) ಕರ್ಣನಾಳ b) ಯುಸ್ಟೇಶಿಯನ್ ನಾಳ c) ಕಾಕ್ಲಿಯಾ d) ಕಿವಿಯ ತಮಟೆ
41. a) ಸಮಾಂಗತೆ ಎಂದರೇನು? 5 ಕಾರ್ಬನ್ ಪರಮಾಣುಗಳುಳ್ಳ ಆಲೇನ್‌ನ ಸಮಾಂಗಿಗಳ ಅಣುಸೂತ್ರ ಮತ್ತು ರಚನಾಸೂತ್ರ ಬರೆಯಿರಿ.

    b) ಸೈಕ್ಲೋ ಆಲ್ಕೇನ್ ಗುಂಪಿನ 4 ಸದಸ್ಯರ ರಚನಾ ಸೂತ್ರ ಬರೆಯಿರಿ.

    ಅಥವಾ

    a) ಗ್ಲಿಸರಾಲ್ ಮತ್ತು ಸ್ಯಾಲಿಸಿಲಿಕ್ ಆಮ್ಲದ ಅಣುಸೂತ್ರ ಮತ್ತು ರಚನಾ ಸೂತ್ರವನ್ನು ಬರೆಯಿರಿ.

    b) ಆರೋಮ್ಯಾಟಿಕ್ ಹೈಡ್ರೋಕಾರ್ಬನ್‌ಗಳಿಗೆ 3 ಉದಾಹರಣೆಗಳನ್ನು ಕೊಟ್ಟು ಅವುಗಳ ರಚನಾ ಸೂತ್ರ ಮತ್ತು ಅಣುಸೂತ್ರ ಬರೆಯಿರಿ.
42. a) ಫ್ಲೆಮಿಂಗನ ಎಡಗೈ ನಿಯಮ ನಿರೂಪಿಸಿ. ಅದನ್ನು ಯಾವ ಉದ್ದೇಶಕ್ಕೆ ಉಪಯೋಗಿಸುವರು?

    b) ಡಿ.ಸಿ. ಡೈನಮೊ ಮತ್ತು ಎ.ಸಿ. ಡೈನಮೋದ ಎರಡೆರಡು ಉಪಯೋಗಗಳನ್ನು ಬರೆಯಿರಿ.

    ಅಥವಾ

    ಕಾರಣ ಕೊಡಿ :

    a) ಫ್ಯಾರಡೆಯ ಪ್ರಯೋಗದಲ್ಲಿ ಪ್ರೇರಿತ ವಿದ್ಯುತ್ ಪ್ರವಾಹವು ಡಿ.ಸಿ. ವಿದ್ಯುತ್ ಪ್ರವಾಹವಲ್ಲ.

    b) ಡಿ.ಸಿ. ಡೈನಮೊ ರಚನೆಯಲ್ಲಿ ಜಾರು ಉಂಗುರಗಳ ಬದಲಾಗಿ ಸೀಳು ಉಂಗುರಗಳನ್ನು ಬಳಸಿದೆ.

---------